ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಪಾಟೀ ಸವಾಲು ಪ್ರತಿವಾದಿಯರ ಪರವಾಗಿ- ಜಿಎಂಯು ವಕೀಲರಿಂದ

ನನ್ನ ತಾಯಿ ನರಸಮ್ಮ ಆರೋಗ್ಯವಾಗಿರುತ್ತಾರೆಯೋ ಅಂದರೆ ಸಾಕ್ಷಿದಾರನು ಮೆತ್ತಗಾಗಿರುತ್ತಾರೆ ಅಂತ ಹೇಳುತ್ತಾನೆ. ಅವರಿಗೆ ಈಗ ಅಂದಾಜು 80 ವರ್ಷ ವಯಸ್ಸಾಗಿರಬಹುದು. ನನ್ನ ತಾತ ಓಬಯ್ಯನಿಗೆ ಒಬ್ಬ ಸಹೋದರಿನಿದ್ದು ಆತನ ಹೆಸರು ಕೊತ್ತಪಾಲಯ್ಯ. ಅವರಿಬ್ಬರಿಗೆ ನಲ್ಲಮ್ಮ ಅಂತ ತಂಗಿ ಇದ್ದಳು ಅನ್ನುವುದು ಸುಳ್ಳು. ನನ್ನ ತಂದೆ ಸಣ್ಣ ಹನುಮಂತಪ್ಪನ ಹಿರಿಯ ಸಹೋದರನಾದ ದೊಡ್ಡ ಹನುಮಂತಪ್ಪ ಜೀವಂತ ಇರುವುದಿಲ್ಲ. ದೊಡ್ಡಹನುಮಂತಪ್ಪನ ಮಕ್ಕಳ ಪೈಕಿ ಒಬ್ಬ ಮಗ ಪಾಲಯ್ಯ ಅನ್ನುವವರು ಮೃತರಾಗಿರುತ್ತಾರೆ. ಈ ಪ್ರಕರಣದ 3ನೇ ಪ್ರತಿವಾದಿ ಆತನ ಹೆಂಡತಿ ಅನ್ನುವುದು ನಿಜ. ಅವರಿಬ್ಬರಿಗೆ ಶಿಲ್ಪ , ಗುಂಡಪ್ಪ ಹಾಗೂ ಲಕ್ಷ್ಮಿ ಅಂತ ಮೂರು ಜನ ಮಕ್ಕಳು ಇರುತ್ತಾರೆ ಅನ್ನುವುದು ನಿಜ. ಅವರನ್ನು ಈ ಪ್ರಕರಣದಲ್ಲಿ ಪಕ್ಷಗಾರರಾಗಿ ಮಾಡಿರುವುದಿಲ್ಲ.

2. ದಾವಾ ಆಸ್ತಿಗಳನ್ನು ಹೊರತುಪಡಿಸಿ ನಮಗೆ 6 ಎಕರೆ , 5 ಎಕರೆ ಮತ್ತು 12 ಎಕರೆ ಕ್ಷೇತ್ರದ ಮೂರು ಜಮೀನುಗಳು ಇರುತ್ತವೆ. ಸದರಿ 21 ಎಕರೆ ಜಮೀನುಗಳನ್ನು ಹೊರತುಪಡಿಸಿ ನಮಗೆ ಬೇರೆ ಜಮೀನುಗಳು ಇರುವುದಿಲ್ಲ. ಸದರಿ ಜಮೀನುಗಳು ನಮಗೆ ನಲ್ಲಮ್ಮಜ್ಜಿ ದಾನ ಮಾಡಿರುತ್ತಾಳೆ. ನಲ್ಲಮ್ಮಜ್ಜಿ ನಮ್ಮ ತಾಯಿ ನರಸಮ್ಮಳ ತಾಯಿ ಇರುತ್ತಾಳೆ. ಸದರಿ ನಲ್ಲಮ್ಮಜ್ಜಿಯೇ ಕೊತ್ತಪಾಲಯ್ಯ ಮತ್ತು ಓಬಯ್ಯನ ತಂಗಿ ಇರುತ್ತಾಳೆ ಅನ್ನುವ ವಿಷಯ ನನಗೆ ಗೊತ್ತಿರುವುದಿಲ್ಲ. ನಲ್ಲಮ್ಮಳನ್ನು ಕಾಲುವೆಹಳ್ಳಿಗೆ ಅವಳ ಸಹೊದರರಾದ ಕೊತ್ತಪಾಲಯ್ಯ ಮತ್ತು ಓಬಯ್ಯ ಮದುವೆ ಮಾಡಿಕೊಟ್ಟಿದ್ದರು ಅನ್ನುವ ವಿಷಯ ನನಗೆ ಗೊತ್ತಿರುವುದಿಲ್ಲ. ನಲ್ಲಮ್ಮಳ ಗಂಡನ ಹೆಸರು ಕರಿಯಣ್ಣ ಅಂತ ಕೇಳಿ ಗೊತ್ತು. ಅವರಿಬ್ಬರಿಗೆ ಮಕ್ಕಳು ಇರಲಿಲ್ಲ ಅನ್ನುವುದು ನಿಜ.

3. ನಲ್ಲಮ್ಮಳಿಗೆ ಮಕ್ಕಳು ಇರದೇ ಇದ್ದ ಕಾರಣ, ನನ್ನ ತಂದೆ 10-12 ವರ್ಷ ವಯಸ್ಸಿನವನಿದ್ದಾಗ ಅವನನ್ನು ಸಾಕಿಕೊಂಡಿದ್ದಳು ಅನ್ನುವುದು ಸುಳ್ಳು. ನನ್ನ ತಂದೆ ನಲ್ಲಮ್ಮ ಹಾಗೂ ಅವಳ ಗಂಡನ ಜೊತೆಯಲ್ಲಿ ಇದ್ದು , ಅವರ ಸಾಕುಮಗನಾಗಿ ಅವರ

ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದ ಅನ್ನುವುದು ಸುಳ್ಳು. ಅವರಿಬ್ಬರಿಗೆ ವಾರಸುದಾರರು ಯಾರು ಇರದೇ ಇರುವ ಕಾರಣ ಅವರ ಆಸ್ತಿಗಳನ್ನು ನನ್ನ ಅಜ್ಜ ಓಬಯ್ಯನಿಗೆ ಬಂದಿರುತ್ತವೆ ಅನ್ನುವುದು ಸುಳ್ಳು. ನನ್ನ ತಂದೆ ನಲ್ಲಮ್ಮ ಹಾಗೂ ಅವಳ ಗಂಡನ ಸಾಕುಮಗನಾಗಿ ಅವರೊಂದಿಗೆ ಇರುತ್ತಿದ್ದ ಕಾರಣ, ನನ್ನ ತಂದೆ ಅವರಿಬ್ಬರ ಆಸ್ತಿಗಳನ್ನು ನನ್ನ ತಂದೆಯ ಹಿಸ್ಸೆಗೆ ಕೊಟ್ಟಿರುತ್ತಾನೆ ಅನ್ನುವುದು ಸುಳ್ಳು. ದಾವಾ ಆಸ್ತಿಗಳನ್ನು ನನ್ನ ಅಜ್ಜ ಓಬಯ್ಯ ತನ್ನ ಇನ್ನುಳಿದ ಮಕ್ಕಳಾದ ದೊಡ್ಡಹನುಮಂತಪ್ಪ , ಭೀಮಯ್ಯ , ಓಬನಾಯ್ಕ ಹಾಗೂ ಕರಿಯಣ್ಣ ಇವರ ಪಾಲಿಗೆ ಕೊಟ್ಟಿರುತ್ತಾನೆ ಅನ್ನುವುದು ಸುಳ್ಳು.

4. ಈ ಮೊದಲು ನಾನು ಹಾಗೂ ನನ್ನ ತಾಯಿ ಸೇರಿ ಈ ಪ್ರಕರಣದ ಪ್ರತಿವಾದಿಯರ ವಿರುದ್ಧ ಮೂಲ ದಾವೆ ನಂ.126/1995 ನ್ನು ದಾಖಲಿಸಿದ್ದೆವು ಅನ್ನುವುದು ಸುಳ್ಳು , ಆದರೆ ನನ್ನ ತಾಯಿ ಸದರಿ ದಾವೆಯನ್ನು ಮಾಡಿದ್ದಳು. ಸದರಿ ಪ್ರಕರಣ ಚಳ್ಳಕೆರೆ ನ್ಯಾಯಾಲಯಕ್ಕೆ ವರ್ಗಾವಣೆಯಾಗಿ ಮೂಲ ದಾವೆ ನಂ.40/2002 ಅಂತ ಮರು ನೋಂದಣಿಯಾಗಿ ಈ ನ್ಯಾಯಾಲಯದಲ್ಲಿ ನಿಖಾಲೆಯಾಗಿರುತ್ತದೆ ಅನ್ನುವುದು ನಿಜ. ಆ ಪ್ರಕರಣದಲ್ಲಿ ನಾವು ನನ್ನ ಅಜ್ಜ ಓಬಯ್ಯ ಹಾಗೂ ಆತನ ಸಹೊದರ ಕೊತ್ತಪಾಲಯ್ಯ ಇವರಿಬ್ಬಗೆ ಸಂಬಂದಪಟ್ಟ ಆಸ್ತಿಗಳನ್ನು ಸೇರಿಸಿದ್ದರು ಅನ್ನುವುದು ಸುಳ್ಳು , ಆದರೆ ನನ್ನ ತಾಯಿ ಕೇವಲ ಕೊತ್ತಪಾಲಯ್ಯನ ಆಸ್ತಿಗಳಿಗೆ ಸಂಬಂದಪಟ್ಟಂತೆ ಆ ದಾವೆಯನ್ನು ಮಾಡಿದ್ದಳು. ಆ ಪ್ರಕರಣದಲ್ಲಿ ಆ ಪ್ರಕರಣ ದಾವಾ ಆಸ್ತಿಗಳಲ್ಲಿ ನಮಗೆ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ ಅಂತ ಹೇಳಿ ನ್ಯಾಯಾಲಯವು ಅದು ವಜಾ ಮಾಡಿರುತ್ತದೆ ಅನ್ನುವುದು ನಿಜ. ಸದರಿ ತೀರ್ಪಿನ ವಿರುದ್ದ ನಾವು ಮೇಲ್ಮನವಿ ಸಲ್ಲಿಸಿರುವುದಿಲ್ಲ ಅನ್ನುವುದು ಸುಳ್ಳು.

5. ಪುನಃ ನಾನು, ನನ್ನ ತಾಯಿ ಹಾಗೂ ನನ್ನ ಸಹೋದರರು ಸೇರಿ ಇದೇ ನ್ಯಾಯಾಲಯದಲ್ಲಿ ಮೂಲ ದಾವೆ ನಂ.8/2013 ಪ್ರಕರಣ ದಾಖಲಿಸಿರುತ್ತೇವೆ ಅನ್ನುವುದು ನಿಜ. ಆ ಪ್ರಕರಣದಲ್ಲಿ ನಾವು ಮೆಮೋ ಸಲ್ಲಿಸಿ ಸದರಿ ಪ್ರಕರಣ ನಡೆಸಲು ಆಸಕ್ತಿ ಇರುವುದಿಲ್ಲ ಅಂತ ಹೇಳಿ ವಜಾ ಮಾಡಿಸಿಕೊಂಡಿರುತ್ತೇವೆ ಅನ್ನುವುದು ಸುಳ್ಳು. ಸದರಿ ವಜಾ ಆದ ಆದೇಶದ

ವಿರುದ್ದ ಮಿಸ್ ನಂ.5/2013 ನ್ನು ಮೂಲ ದಾವೆ ನಂ.8/2013 ರೇಸ್ಟೋರ್ ಮಾಡಿಸಲು ಅರ್ಜಿ ಸಲ್ಲಿಸಿದ್ದೆ ಅನ್ನುವುದು ನಿಜ. ಮೂಲ ದಾವೆ ನಂ.8/2013 ಪ್ರಕರಣದಲ್ಲಿ ನಾನು, ನನ್ನ ತಾಯಿ ನ್ಯಾಯಾಲಯಕ್ಕೆ ಬರುತ್ತಿದ್ದೆವು ಅನ್ನುವುದು ನಿಜ. ಮಿಸ್ ನಂ.5/2013 ಕೂಡ ವಜಾ ಆಗಿರುತ್ತದೆ ಅನ್ನುವುದು ಸುಳ್ಳು. ಸದರಿ ವಜಾ ಆದ ಆದೇಶದ ವಿರುದ್ದ ನಾವು ಚಿತ್ರದುರ್ಗದ ಜಿಲ್ಲಾ ನ್ಯಾಯಾಲಯದಲ್ಲಿ ಎಂ.ಎ.ನಂ.8/2014 ಸಲ್ಲಿಸಿರುತ್ತೇವೆ ಅನ್ನುವುದು ನಿಜ. ಸದರಿ ಪ್ರಕರಣವು ಕೂಡ ವಜಾ ಆಗಿರುತ್ತದೆ ಅನ್ನುವುದು ನಿಜ. ಮೂಲ ದಾವೆ ನಂ.8/2013 ರಲ್ಲಿಯ ದಾವಾ ಆಸ್ತಿಗಳು ಹಾಗೂ ಈ ಪ್ರಕರಣದ ದಾವಾ ಆಸ್ತಿಗಳು ಒಂದೇ ಆಗಿರುತ್ತದೆ ಅನ್ನುವುದು ನಿಜ.

6. ದಾವಾ ಆಸ್ತಿಗಳು ನನ್ನ ತಂದೆಯ ಕಾಲದಲ್ಲಾಗಲೀ ಅಥವಾ ನಮ್ಮ ಜಂಟಿ ಸ್ವಾಧೀನದಲ್ಲಿ ಯಾವತ್ತು ಇರುವುದಿಲ್ಲ ಅನ್ನುವುದು ಸುಳ್ಳು. ನನ್ನ ತಂದೆ ನಲ್ಲಮ್ಮನ ಕುಟುಂಬಕ್ಕೆ ಸಾಕು ಮಗನಾಗಿ ಹೋದ ದಿನದಿಂದ, ಆತನು ತನ್ನ ತಂದೆಯ ಒಟ್ಟು ಕುಟುಂಬದ ಸದಸ್ಯನಾಗಿ ಉಳಿದಿರುವುದಿಲ್ಲ ಅನ್ನುವುದು ಸುಳ್ಳು. ನಲ್ಲಮ್ಮ ತೀರಿಕೊಂಡ ನಂತರ ನನ್ನ ತಂದೆ ನಲ್ಲಮ್ಮನ ಆಸ್ತಿಗಳನ್ನು ನನ್ನ ತಂದೆಯ ಹಿಸ್ಸೆಗೆ ಕೊಟ್ಟಿರುತ್ತಾನೆ ಅನ್ನುವುದು ಸುಳ್ಳು.

7. ಇತ್ತೀಚೆಗೆ ಪ್ರತಿವಾದಿಯರಿಗೆ ಗೊತ್ತಿಲ್ಲದಂತೆ 2013-14 ನೇ ಇಸವಿಯಲ್ಲಿ ದಾವಾ ಆಸ್ತಿಗಳಿಗೆ ಪ್ರತಿವಾದಿಯರ ಹೆಸರಿನೊಂದಿಗೆ ನಮ್ಮ ಹೆಸರುಗಳು ದಾಖಲಿಸಿಕೊಂಡಿರುತ್ತೇವೆ ಅನ್ನುವುದು ಸುಳ್ಳು. ಒಂದು ದಾವಾ ಜಮೀನಿನ ಕ್ಷೇತ್ರ 41 ಎಕರೆ, ಇನ್ನೊಂದು ಜಮೀನಿನ ಕ್ಷೇತ್ರ 13 ಎಕರೆ ಹಾಗೂ ಮತ್ತೊಂದು ಜಮೀನಿನ ಕ್ಷೇತ್ರ 3 ಎಕರೆ ಇರುತ್ತದೆ. ಸದರಿ ಜಮೀನುಗಳಲ್ಲಿ ದೊಡ್ಡ ಹನುಮಂತಪ್ಪ , ಭೀಮಯ್ಯ 'ಒಬನಾಯ್ಕ ಹಾಗೂ ಕರಿಯಣ್ಣ ಇವರ ಜಂಟಿ ಸ್ವಾಧೀನದಲ್ಲಿ ಇರುತ್ತವೆ ಅನ್ನುವುದು ಸುಳ್ಳು. ನಮಗೆ ದಾವಾ ಆಸಿತಗಳಲ್ಲಿ ಯಾವುದೇ ಹಕ್ಕು ಹಿತಾಸಕ್ತಿ ಇರುವುದಿಲ್ಲ , ಕೇವಲ ದಾವಾ ಆಸ್ತಿಗಳಲ್ಲಿ ಪಾಲು ಪಡೆಯಬೇಕೆನ್ನುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಅನ್ನುವುದು ಸುಳ್ಳು. ನಾವು ಸಲ್ಲಿಸಿದ

ದಿಃ 10-12-2015

ಮೊದಲಿನ ಪ್ರಕರಣಗಳು ವಜಾ ಆದ ವಿಷಯ ನನಗೆ, ನನ್ನ ತಾಯಿ ಹಾಗೂ ಸಹೋದರರಿಗೆ ಗೊತ್ತಿದ್ದರೂ ಕೂಡ ಪ್ರತಿವಾದಿಯರಿಗೆ ತೊಂದರೆ ಕೊಡಬೇಕೆನ್ನುವ ಉದ್ದೇಶದಿಂದ ಸುಳ್ಳು ದಾವೆ ಮಾಡಿರುತ್ತೇನೆ ಅನ್ನುವುದು ಸುಳ್ಳು. ಕಂದಾಯ ಅಧಿಕಾರಿಗಳೊಂದಿಗೆ ಶರೀಕಾಗಿ, ನಮ್ಮ ಪ್ರಕರಣಕ್ಕೆ ಪೂರಕವಾಗುವಂತೆ ಕಂದಾಯ ದಾಖಲೆಗಳನ್ನು ಸೃಷ್ಟಿಸಿಕೊಂಡು ಹಾಜರುಪಡಿಸಿರುತ್ತೇನೆ ಅನ್ನುವುದು ಸುಳ್ಳು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಉಕ್ತ ಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು).

ಓ ಹೇ ಕೇ ಸರಿ ಇದೆ

<>

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ,ಚಳ್ಳಕೆರೆ